1 JAN 1928
M.240.

ಶ್ರೀ

ಶ್ರೀ ವೈಶ್ಯಜಗದ್ಗುರು

ಶ್ರೀಮತ್ತಿರುವಾಲಂಗಾಡು ಇಮ್ಮಡಿ

ಆಘೋರಧರ್ಮ ಶಿವಾಚಾರ್ಯ ಸಂಸ್ಥಾನಕ್ಕೆ ಸೇರಿದ

ಮೈಸೂರು ಸರ್ಕಾರದ ರಿಕಾರ್ಡುಗಳು.

ವೆ. ಬಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು ಸಿಟಿ

1647-48. ಕಂಠೀರವ ನರಸರಾಜ ವಡೆಯರವರು.

ಸರ್ವಜಿತು ಸಂವತ್ಸರದ ಚೈತ್ರ ಶು|| ೧೫ಲ್ಲು ಶ್ರೀಮತು || || ಪಟ್ಟಣದ ಹೋಬಳಿ ವಿಚಾರದ ದೇವ್ಯೆಯಗೆ ಬರಸಿಕಳುಹಿದ ನಿರೂಪ ಆದಾಗಿ. ತಿರುಮಕೂಡಲ ಧರ್ಮ ಶಿವಾಚಾರ್ಯರ ಮಠಕ್ಕೆ ಬನ್ನೂರಲ್ಲಿ ಖ. ೧ ಉ.೧||೦ ಗದ್ದೆಯು ಪ್ರಾಕಾರಭ್ಯ ನಡದುಬಂದು ಈಚಿಗೆ ಪ್ರವೋದೂತ ಸಂವತ್ಸರಾರಭ್ಯದಿಂದ ಹುಟ್ಟಿದ ಹುಟ್ಟುವಳಿಯನೆಲ್ಲನನ್ನೂ ಆಶ್ರವಣೆಯವರು ತೆಗದುಕೊಂಡು ಬರುತ್ತಾ ಇಧಾರೆ. ತನುಗೂ ಎಲ್ಲಾ ಆಗ್ರಹಾರ ಭಟಮಾನ್ಯಗಳಮೇರೆಗೆ ನಡಸಿಕೊಂಡು ಬರಬೇಕೆಂದು ಹೇಳಿಕೊಂಡಕಾರಣ ಅದೇರೀತಿಗೆ ಪ್ರಾಕು ನಡಿಯುತ್ತಾ ಇದ್ದಮೇರೆಗೆ ಸರ್ವಮಾನ್ಯವಾಗಿ ನಡಸಿಕೊಂಡುಬರುವಹಾಗೆ ಕಟ್ಲೆಯನ್ನು ಮಾಡಿಸಿ ಇಧೇನೆಯಾಗಲಾಗಿ ಆಪ್ರಕಾರಕ್ಕೆ ತಿರುಮಕೂಡಲ ಧರ್ಮಶಿವಾಚಾರ್ಯರ ಮಠದಲ್ಲಿ ನಡೆವ ಧರ್ಮಕ್ಕೆ ಬನ್ನೂರಲ್ಲಿನ ಡರಗದ್ದೆ ಖಂ.೧ ಉ. ೧||೦ ಒಂದು ಖಂಡುಗದ ಬಂದು ಕೂಳಗದ ಎರಡು ಬಳ್ಳ ಗದ್ದೆಯನ್ನು ಪ್ರಾಕು ನಡೆಯುತ್ತಾ ಇದ್ದಮೇರೆಗೆ ಸರ್ವಮಾನ್ಯವಾಗಿ ನಡಸಿಕೊಂಡು ಬಗುವದು. ಈ ನಿರೂಪಪ್ರತಿಯನ್ನು ಕರಣೀಕರ ಕಡಿತಕ್ಕೆ ಬರಸಿ ಈ ಧರ್ಮಶಿವಾಚಾರ್ಯರ ವಶಕ್ಕೆ ಕೊಡಿಸಿಬಿಡುವದು.

ಈ ಬಳಿ ಶ್ರೀ ಎಂದಿಧೆ.

ಕಂಠೀರವ ನರಸರಾಜ ಪಡೆಯರವರು.

ಸರ್ವಜಿತುಸಂತ್ಸರದ ಜ್ಯೈತ್ರ ಶು॥ ೧೫ ರಲ್ಲು ಶ್ರೀಮತು ॥—॥ ದೇವಸ್ಥಾನದ ಶೀಪೆ ಪಾರುಪತ್ತೇಗಾರ ಆಪ್ರಮೆಯ ಹೆಬ್ಬಾರವಗೆ ಬರಶಿಕಳುಹಿದ ನಿರೂಪ ಆದಾಗಿ. ತಿರುಮಕೂಡಲಸ್ಥಳದ ಮಾದಾಪುರವೆಂಬ ಗ್ರಾನುದಲ್ಲಿ ತಿರುಮಕೂಡಲ ಧರ್ಮಶಿವಾಚಾರ್ಯರಮಠಕ್ಕೆ ನಡದುಬರುತ್ತಾಇದ್ದ ೆಬೆದ್ದಲುಭೂಮಿ ಗ ॥ ನೆ ಮಾಧವನಹಳ್ಳಿಯಲ್ಲಿ ನಡದುಬರುತ್ತಾಇದ್ದ ತೋಟ ಖ॥೦ ಮುಳ್ಳೂರಲ್ಲಿಗದ್ದೆ ಖ ೧॥೦ ಉಭಯ೦ ಗದ್ದೆ ತೋಟ ಸಹಾವಾಗಿ ಖ॥೨ ಉಂ ಬಿದ್ದಲು ಗು ॥ ನೆ ಸಮೇತವಾಗಿ ಪ್ರಾಕಾರಭ್ಯದಿಂದಾ ನಡದುಬಂದು ಈಚಿಗೆ ಪ್ರಮೋದೂತ ಸಂವತ್ಸರದ ಆರಭ್ಯ ದಿಂದಾ ಹುಟ್ಟದ ಹುಟ್ಟುವಳಿಯನೆಲ್ಲವನ್ನು ದೇವಸ್ಥಾನದ ಹೋಬಳಿಯವರು ತೆಗದುಕೊಂಡು ಬರುತ್ತಾಇಧಾರೆ.ತಮು ಗೂ ಎಲ್ಲಾ ಆಗ್ರಹಾರ ಭಟಮಾನ್ಯಗಳಮೇರೆಗೆ ನಡಶಿಕೊಂಡುಬರಬೇಕೆಂಬದಾಗಿ ಹೇಳಿಕೊಂಡಕಾರಣ ಅದೇರೀತಿಗೆ ಗದ್ದೆ ಬೆದ್ದಲು ತೋಟ ಸಹಾ ತಿರುಮಕೂಡಲ ಮಠದ ಧರ್ಮಕ್ಕೆ ಪ್ರಾಕುನಡಿಯುತ್ತಾ ಇದ್ದಮೇರೆಗೆ ಸರ್ವಮಾನ್ಯ ವಾಗಿ ನಡಶಿಕೊಂಡು ಬರುವಹಾಗೆ ಕಟ್ಟಿಳೆಯನ್ನುಮಾಡಿಸಿ ಇಭೇವೆಯಾಗಲಾಗಿ ಆಪ್ರಕಾರಕ್ಕೆ ಮುಳ್ಳೂರಲ್ಲಿ ಗದ್ದೆ ಖ ೧॥ ಮಾಧವನಹಳ್ಳಿಯಲ್ಲಿ ತೋಟ ಖ॥ ಮಾದಾಪುರದಲ್ಲಿ ಬೆದ್ದಲು ಗು ॥ ನೆ ಸಮೇತವಾಗಿ ತಿರುಮಕೂಡಲ ಮಠದ ಧರ್ಮಕ್ಕೆ ಧರ್ಮಶಿವಾಚಾರ್ಯರ ಹವಾಲೆಗೆ ಪ್ರಾಕುಮೇರೆಗೆ ಬಿಟ್ಟುಕೊಟ್ಟು ಸರ್ವಮಾನ್ಯವಾಗಿ ನಡಶಿಕೊಂಡುಬರುವದು. ಈ ನಿರೂಪಪ್ರತಿಯನ್ನು ಕರಣೀಕರಕಡಿತಕ್ಕೆ ಬರಸಿ ಈ ಧರ್ಮಶಿವಾಚಾರ್ಯರ ವಶಕ್ಕೆ ಕೊಡಿಸುವದು.

॥ ಈ ಪ್ರತಿನಿರೂಪ ಪ್ರತಿ ॥

ಕಂಠೀರವ ನರಸರಾಜ ವಡೆಯರವರು.

ಸರ್ವಜಿತು ಸಂವತ್ಸರದ ಚೈತ್ರ ಶು|| ೧೫ ಲ್ಲು ಶ್ರೀಮತು || || ಮಹಿಸೂರು ನಗರದ ಹೋಬಳಿ ವಿಚಾರದ ಚಿಲುವೈಯ್ಯಗೆ ಬರಶಿಕಳುಹಿದ ನಿರೂಪ ಆದಾಗಿ--ತಿರುಮುಕೂಡಲ ಧರ್ಮ ಶಿವಾಚಾರ್ಯರ ಮಠಕ್ಕೆ ನಡದುಬರುತ್ತಾ ಇದ್ದ ಹೊಂಗನೂರು ಸ್ಥಳದ ಅನ್ನುನಪುರವೆಂಬ ಗ್ರಾಮಕ್ಕೆ ರೇಖೆಗೆ ೧೨ ನೊರಡಿಪುರವೆಂಬ ಗ್ರಾಮ ೧ಕ್ಕೆ ರೇಖೆ ಗೆ ೪೩೯ ಉಭಯಂ ಗ್ರಾಮ ೨ಕ್ಕೆ ಗೆ ೫೫ ಉ ೪ ಕೊಟ್ಟವಾಡಿಯಲ್ಲಿ ಬೆದ್ದಲು ಗೆ ೨೦ ಹೇಕನೂರಲ್ಲಿ ಬಿದ್ದಲು ಗ ೨, ಕೆರೆಹಟ್ಟಿಯಲ್ಲಿ ಬೆದ್ದಲು ಗೆ ೧೯೨, ಬೆದ್ದಲಭೂಮಿ ೨೩೯|೨ ನಿಡುಸೊಗೆಯಲ್ಲಿ ಗದ್ದೆ ಖ ೧ ಹೊಂಗೆನೂರಲ್ಲಿ ಗದ್ದೆ ಖ ೪ ಕಾಟವಾಡಿಯಲ್ಲಿ ಗದ್ದೆ ಖ ೨ ಬಳಗುಳಿದಲ್ಲಿ ಗದ್ದೆ ಖ ||೦ ಮೆಳಾಪುರದಲ್ಲಿ ಖ ೧||೦ ರಂಗಸಮುದ್ರದಲ್ಲಿ ಖ ೨ ಯಳೆಂದೂರು ಸ್ಥಳದ ಯೆರೆಯೂರಲ್ಲಿ ಗದ್ದೆ ಖ ೨ ಹೊಂಗನೂರಲ್ಲೂ ಕಟ್ಟೆಕೆರೆ ಕೆಳಗೆ ಗದ್ದೆ ಖ ೧ ಯಲಂ ಗದ್ದೆ ಖ ೨೪ಕ್ಕೆ ರೇಖೆ ಗೆ ೨೪ ಈ ಗ್ರಾಮ ೨ ಗದ್ದೆ ಖ ೨೪ ಯೆರೆ ಭೂಮಿ ಬೆದ್ದಲು ಸಹಾ ಗೆ ೨೩೯೨ ಯಲಂ ರೇಖೆ ಗೆ ೧೦೨||೦ ನೂರ ಎರಡು ವರಹವನ್ನು ಆರುಹಣ ಪ್ರಾಕಾರಭ್ಯದಿಂದಾ ನಡದು ಬಂದು ಈಚೆಗೆ ಪ್ರನೋದೂತ ಸಂವತ್ಸರಾರಭ್ಯ ಹುಟ್ಟಿದ ಹುಟ್ಟುನಳಿ ಹಣವನ್ನು ಅಠವಣೆ ಹೋಬಳಿಯವರು ತೆಗೆದು ಕ್ಕೊಂಡುಬರುತ್ತಾ ಇಧಾರೆಯಾದ್ದರಿಂದಾ ತಮಗೂ ಎಲ್ಲಾ ಅಗ್ರಹಾರ ಭಟಮಾನ್ಯಗಳ ಮೇರೆಗೆ ನಡಸಿ ಕೊಂಡು ಬರಬೇಕೆಂದು ಹೇಳಿಕೊಂಡ ಕಾರಣ ರೂಪವಾಗಿ ವರುಷ ಒಂದಕ್ಕೆ ಕಂಗ ೨೦ (ಇಪ್ಪತ್ತು) ವರಹದ ಮೇರೆಯಲ್ಲಿ ಅಠವಣೆ ಹೋಬಳಿಗೆ ಬರಮಾಡಿಕೊಂಡು ಈ ಬಗೆ ಗದ್ದೆ ಬೆದ್ದಲು ತೋಟ ಗ್ರಾನುಗಳು ಸಹಾ ಸರ್ವಮಾನ್ಯವಾಗಿ ನಡೆನಹಾಗೆ ಕಟ್ಟಲೆಯನ್ನು ಮಾಡಿಸಿ ಇಧೇನೆಯಾಗಲಾಗಿ ಆ ಪ್ರಕಾರಕ್ಕೆ ಈ ಧರ್ಮ ಶಿವಾಚಾರ್ಯರಿಂದ ವರುಷ ೧ಕ್ಕೆ ಕಂ ೨೦ (ಇಪ್ಪತ್ತು) ವರಹದಮೇರೆಯಲ್ಲಿ ಅಠವಣೆಗೆ ಹೋಬಳಿಗೆ ವರುಷಂಪ್ರತಿ ವರುಷ ತೆಗದು ಕೊಂಬದು. ಈಬಗೆ ಗ್ರಾನುಗಳು ಗದ್ದೆ ಬೆದ್ದಲು ತೋಟ ಮೊದಲಾಗಿ ತಿರುಮುಕೂಡಲ ಮಠದಲ್ಲಿ ನಡೆನ ಧರ್ಮಕ್ಕೆ ಧರ್ಮಶಿವಾಚಾರ್ಯರ ವಶಕ್ಕೆ ಬಿಟ್ಟುಕೊಟ್ಟು ಸರ್ವಮಾನ್ಯವಾಗಿ ನಡಸಿಕೊಂಡು ಬರುವದು. ಈ ನಿರೂಪ ಪ್ರತಿಯನ್ನು ಕರಣಿಕರ ಕಡಿತಕ್ಕೆ ಬರಸಿ ಈ ಧರ್ಮಶಿವಾಚಾರ್ಯರ ವಶಕ್ಕೆ ಕೊಡಿಸುವದು.

ಈಬಳಿ ಶ್ರೀ ಎಂದಿಥೆ.



ಕಂಠೀರವ ನರಸರಾಜ ವಡೆಯರವರು.

ಸರ್ವಜಿತು ಸಂವತ್ಸರದ ಚೈತ್ರ ಶು॥ ೧೫ ಲ್ಲು ಶ್ರೀಮತು॥ ॥ದೇವಸ್ಥಾನದ ಸೀಮೆ ಪಾರುಪತ್ಯಗಾರ ಅಪ್ಪಮೈ ಹೆಬ್ಬಾರವಗೆ ಬರಸಿಕಳುಹಿದ ನಿರೂಪ ಆದಾಗಿ. ತಿರುಮಕೂಡಲ ಸ್ಥಳದ ಮಾದಾಪುರವೆಂಬ ಗ್ರಾಮದಲ್ಲಿ ತಿರುಮಕೂಡಲ ಧರ್ಮಶಿವಾಚಾರ್ಯ್ಯರ ಮಠಕ್ಕೆ ನಡದುಬರುತ್ತಾ ಇದ್ದ ಬೆದ್ದಲು ಭೂಮಿ ಗ॥ ೩ ಮಾಧವನಹಳ್ಳಿ ಯಲ್ಲಿ ನಡದುಬರುತ್ತಾ ಇದ್ದ ತೋಟ ಖ ॥೦ ಮುಳ್ಳೂರಲ್ಲಿ ಗದ್ದೆ ಖ॥ ೧॥೦ ಉಭಯಂ ಗದ್ದೆ ತೋಟ ಸಹಾವಾಗಿ ಖ ೨ ಬೆದ್ದ ಗೆ ೯೩ ಸಮೇತವಾಗಿ ಪ್ರಾಕಾರಭ್ಯದಿಂದ ನಡದುಬಂದು ಈಚಿಗೆ ಪ್ರನೋದೂತ ಸಂವತ್ಸರದ ಆರಭ್ಯ ದಿಂದ ಹುಟ್ಟಿದ ಹುಟ್ಟುವಳಿಯನೆಲ್ಲವನ್ನೂ ದೇವಸ್ಥಾನದ ಹೋಬಳಿಯವರು ತೆಗದುಕೊಂಡು ಬರುತ್ತಾ ಇಧಾರೆ. ತಮಗೂ ಎಲ್ಲಾ ಅಗ್ರಹಾರ ಭಟಮಾನ್ಯಗಳ ಮೇರೆಗೆ ನಡಸಿಕೊಂಡು ಬರಬೇಕೆಂದು ಹೇಳಿಕೊಂಡಕಾರಣ ಅದೇ ರೀತಿಗೆ ಈಬಗೆ ಗದ್ದೆ ಬೆದ್ದಲು ತೋಟ ಸಹ ಈ ತಿರುಮಕೂಡಲಮಠದ ಧರ್ಮಕ್ಕೆ ಪ್ರಾಕು ನಡೆಯುತ್ತಾ ಇದ್ದಮೇರೆಗೆ ಸರ್ವಮಾನ್ಯವಾಗಿ ನಡಸಿಕೊಂಡುಬರುವಹಾಗೆ ಕಟ್ಲೆಯನ್ನು ಮಾಡಿಸಿ ಇದ್ದೇವೆಯಾಗಲಾಗಿ ಆಪ್ರಕಾರಕ್ಕೆ ಮುಳ್ಳೂರಲ್ಲಿ ಗದ್ದೆ ಖ ೧॥೦ ಮಾಧವನಹಳ್ಳಿಯಲ್ಲಿ ತೋಟ ಖ ॥೦ ಮಾದಾವುರವೆಂಬ ಗ್ರಾಮದಲ್ಲಿ ಬೆದ್ದಲ ಭೂಮಿ ಗ॥ ೩ ಸಮೇತವಾಗಿ ತಿರುಮಕೂಡಲ ಮಠದ ಧರ್ಮಕ್ಕೆ ಧರ್ಮ ಶಿವಾಚಾರ್ಯರ ಹವಾಲಿಗೆ ಪ್ರಾಕುಮೇರೆಗೆ ಬಿಟ್ಟುಕೊಟ್ಟು ಸರ್ವಮಾನ್ಯವಾಗಿ ನಡಸಿಕೊಂಡುಬರುವದು. ಈ ನಿರೂಪಪ್ರತಿಯನ್ನು ಕರಣಿಕರ ಕಡಿತಕ್ಕೆ ಬರಸಿ ಈ ಧರ್ಮಶಿವಾಚಾರ್ಯರವಶಕ್ಕೆ ಕೊಡುವದು.

ಈ ಬಳಿ ಶ್ರೀ ಎಂದಿಥೆ.

ಶ್ರೀ ನಂಜುಂಡ

ಅಗಸ್ತೇಶ್ವರ ಸ್ವಾಮಿಯವರು

1636-37

ಧಾತು ಸಂ॥ ಭಾದ್ರಪದ ಬ॥ ೧೧ ರಲ್ಲು ಶ್ರೀಮತು ನಂಜರಾಜ್ಯೆಯ್ಯನವರು. ತಿರುಮಕೂಡ್ಲು ದೇವಸ್ಥಾನದ ಪಾರುಪತ್ಯಗಾರ ವಾಸವೈಯಗೆ ಸಂಪ್ರೀತಿಯಿಂ ಕಾರ್ಯ ಆದಾಗಿ—ತಿರುಮಕೂಡಲ ಶ್ರೀಯವರ ದೇವಸ್ಥಾನದ ಹಸ್ತಾಂತರದ ಶಾನಭಾಗತನವನ್ನು ಧರ್ಮಶಿವಾಚಾರ್ಯರ ಮಠದ ಹವಾಲಿನಲ್ಲಿ ಕಪಿನೈಗೆ ನಡಸಿಕೊಂಡು ಬರುವಹಾಗೆ ಕಟ್ಟೆಮಾಡಿಸಿ ಇದ್ದೀತು. ಆಪ್ರಕಾರಕ್ಕೆ ಹಸ್ತಾಂತರದ ಶಾನಭಾಗತನಕ್ಕೆ ಜತೆಶಾನಭಾಗರಮೇರೆಗೆ ಸಲ್ಲುವ ಸಂಬಳ ಮುಂತಾಗಿ ಕೊಡಿಸಿ ದೇವಸ್ಥಾನದ ಸಕಲ ಲೆಖ್ಖವನ್ನೂ ಕೈಗೊಡಿ ಕಪಿನೈನ ಕೈಯ ಬರಸಿಕ್ಕೊಂಡುಬರುವದು.

ಈ ಬಳಿ ಮೊಹರು ಇಧೆ.

ಶ್ರೀ ನಂಜುಂಡ

ಅಗಸ್ತ್ಯೇಶ್ವರ ಸ್ವಾಮಿಯವರು

ಧಾತು ಸಂ|| ಭಾದ್ರಪದ ಬ|| ೧೧ ರಲ್ಲು ಶ್ರೀಮತು ಸಂಜರಾಜ್ಪೆಯ್ಯನವರು ವಾಸವ್ಪೆಯ್ಯಗೆ ಸಂಪ್ರೀತಿಯಿಂ ಕಾರ್ಯ ಆದಾಗಿ—ತಿರುಮಕೂಡಲ ಶ್ರೀಯವರ ದೇವಸ್ಥಾನದಲ್ಲಿ ಧರ್ಮಶಿನಾಚಾರ್ಯರನರ ಮಠಕ್ಕೆ ವರುಷ ವಂದಕ್ಕೆ ಪ್ರಸಾದ ಸ್ವಾಮ್ಯ ಕಂ ಗ ೧೨ ೯ ೦ ಮೇರೆಗೆ ನಡಸಿ ಕೊಂಡುಬರುವಹಾಗೆ ಕಟ್ಲೆ ಮಾಡಿಸಿ ಇಧೀತು. ಆಪ್ರಕಾರಕ್ಕೆ ಇವರ ಮಠಕ್ಕೆ ವರುಷ ವಂದಕ್ಕೆ ಕಂ ಗ ೧೨ ೯ ೦ ಹನ್ನೆರಡು ವರಹಾಕ್ಕೆ ಪ್ರಸಾದಸ್ವಾಮ್ಯವನ್ನು ಕೊಡಿಸಿ ಈ ಮೇರೆಗೆ ವರುಷಂಪ್ರತಿಯಲ್ಲೂ ನಡಸಿಕ್ಕೊಂಡುಬರುವದು. ಈ ಉತ್ತರವನ್ನು ಶಾನಭಾಗರ ಕಡಿತಕ್ಕೆ ಬರಸಿ ಪುನಃ ಕೊಡಿಸುವದು. ಇವರ ವಿಷಯದಲ್ಲಿ ಸಕಲದರಲ್ಲೂ ಮರ್ಯಾದೆ ಮಾಡಿ ನಡಿಸಿಕೊಂಡುಬರುವದು.

ಈ ಬಳಿ ಮೊಹರು ಇಧೆ.

ಶ್ರೀ ನಂಜುಂಡ

ವಿಶ್ವನಾಥಸ್ವಾಮಿಯವರು

ಪ್ರಮೋದ ಸಂ॥ ಕಾರ್ತಿಕ ಬ॥ ೨ ರಲ್ಲು ಶ್ರೀಮತು ನಂಜರಾಜೈಯ್ಯನವರು ಆಂದೂರು ನಂಜೇಗೌಡಗೆ ಬರಶಿ ಕಳುಹಿದ ಕಾರ್ಯ ಅದಾಗಿ. ಆಂದೂರುಸ್ಥಳದ ಆಂಮಾಪ್ಯಾಟೆಗ್ರಾಮನನ್ನು ನೆರಿಂಜಿಪೇಟೆ ಶ್ರೀಯವರ ದೇವಸ್ಥಾನದ ಹವಾಲಿಗೆ ಈ ಸಂವತ್ಸರದ ಸಾಗುವಳಿಮೇರೆಗೆ ಕ್ರೌತ್ರಿಯಗುತ್ತಿಗೆಯಾಗಿ ನಡಿಸಿಕ್ಕೊಂಡುಬರತಕ್ಕಬಗ್ಗೆ ಮೊದಲೆ ಉತ್ತರ ಕಳುಹಿಸಿರುವಲ್ಲಿ ಈ ಸಂವತ್ಸರಕ್ಕೆ ಕಾಲಾವಧಿಯಲ್ಲಿ ಪ್ರಜೆಗೆ ಸಾಗುವಳಿಯಾಗಿ ಇದ್ದಮೇರೆಗೆ ಹಣವನ್ನು ಬರ ಮಾಡಿಕ್ಕೊಂಡು ಸರಾಗ್ಗೂ ನಡಸಿಕ್ಕೊಂಡುಬರುವದಲ್ಲದೆ ಪ್ರಾಕುಸಂವತ್ಸರದ ಸಾಗುವಳಿ ಪ್ರಕಾರಕ್ಕೆ ಹಣವನ್ನು ಕೊಡಹೇಳಿ ರಜಿಪುಗಳ ನಡಸುತ್ತಾ ಇದ್ದೀಯಂತೆ. ಈರೀತಿ ನಡಸಲು ಕಾರಣವೇನು. ಕಾಲಾವಧಿಯಲ್ಲಿ ಪ್ರಜೆಗೆ ಸಾಗುವಳಿ ಮಾಡಿಸಿ ಇರುವದನ್ನು ಈ ದೇವಸ್ಥಾನದ ಬದುಳುಮಾಡುವನನಿಗೆ ತಾರ್ಕಾಣಿಮಾಡಿಶಿಕೊಟ್ಟು ಆಮೇರೆ ಈ ಗ್ರಾಮವನ್ನು ಈ ದೇನಸ್ಥಾನದ ಹವಾಲಿಗೆ ಪಟ್ಟೆ ಬರಶಿಕೊಡಿಸಿ. ಪಟ್ಟೆಮೇರೆಗೆ ಹಣವನ್ನು ಬರಮಾಡಿಕ್ಕೊಂಡು ಪುನಃ ದೂರುಬಾರದ ರೀತಿಗೆ ಸರಾಗ್ಗೂಡಿ ನಡಶಿಕೊಂಬದು. ಈ ಉತ್ತರವನ್ನು ನೋಡಿಕ್ಕೊಂಡು ಪುನಃ ಇವರವಶಕ್ಕೆ ಕೊಡಿಸೋದು.

ಈ ಬಳಿ ಮೊಹರ್ ಇಧೆ.

ಶ್ರೀ ನಂಜುಂಡ

ನಂಜುಂಡೇಶ್ವರ ಸ್ವಾಮಿಯವರು



ಧಾತು ಸಂವತ್ಸರದ ಭಾದ್ರಪದ ಬಹುಳ ೧೧ರಲ್ಲು ಶ್ರೀಮತು ನಂಜರಾಜೈಯ್ಯನವರು ಗೋಪಾಲೈಯ್ಯಗೆ. ಸಂಪ್ರೀತಿಯಿಂ ಕಾರ್ಯ ಅದಾಗಿ—ಗೆರಳಪುರದ ಶ್ರೀಯವರ ದೇವಸ್ಥಾನದಲ್ಲಿ ನಮ್ಮ ಆಚಾರ್ಯಸ್ವಾಮಿಯವರಿಗೆ ನಡದು ಬರುವ ಪ್ರಕಾರಕ್ಕೆ ಧರ್ಮ ಶಿವಾಚಾರ್ಯರವರಿಗೆ ತೀರ್ಥಪ್ರಸಾದ ಪರಿವಟ್ಟು ಮುಂತಾದ ಮರ್ಯಾದೆಗಳನ್ನು ನಡಿಸಿ ಕ್ಕೊಂಡುಬರುವಹಾಗೆ ಕಟ್ಟ್ಗೆ ಮಾಡಿಸಿ ಇದ್ದೀತು. ಆಪ್ರಕಾರಕ್ಕೆ ಈ ಉಭಯದವರಿಗೂ ತೀರ್ಥ ವಿನಿಯೋಗ ಮುಂತಾದ ಮರ್ಯಾದೆಗಳನ್ನು ಸಮವಾಗಿ ನಡಸಿಕ್ಕೊಂಡುಬರುವದು. ಧರ್ಮ ಶಿವಾಚಾರ್ಯರವರು ಪರಸ್ಥಳದಿಂದ ಗೆರಳಪುರದ ಮರಕ್ಕೆ ಚಿತ್ತೈಸುವಾಗ ದೇವಸ್ಥಾನಕ್ಕೆ ಚಿತ್ತೈಸುವಲ್ಲಿ ರುದ್ರಪಾದವನ್ನು ವಳಗೋಪುರದ ಬಾಗಲು ಪರ್ಯಂತಕ್ಕೂ ಎದುರಾಗಿ ಬಿಜಮಾಡಿಸಿಕ್ಕೊಂಡು ಹೋಗಿ ಸನ್ನಿಧಿಗೆ ಬಿಜಮಾಡಿಸಿಕೊಂಡು ಬಂದು ನೇಮಕಪ್ರಕಾರಕ್ಕೆ ಮರ್ಯಾದೆಯನ್ನು ನಡಸುವದು. ಧರ್ಮ ಶಿವಾಚಾರ್ಯರವರು ತಮ್ಮ ಬಗೆ ಮನುಷ್ಯರನ್ನ ಇರಿಸಿ ಪರಸ್ಥಳಕ್ಕೆ ಚಿತ್ತೈಸುವಲ್ಲಿ ನಮ್ಮ ಆಚಾರ್ಯಸ್ವಾಮಿಯವರಿಗೆ ತೀರ್ಥ ವಿನಿಯೋಗ ಮುಂತಾದ ಮರ್ಯಾದೆಯನ್ನು ಮೊದಲು ನಡಸಿ ಆಮೇಲೆ ಧರ್ಮ ಶಿವಾಚಾರ್ಯರವರ ಬಗೆ ಮನುಷ್ಯರಿಗೆ ನಡಸುವದು. ಆಚಾರ್ಯಸ್ವಾಮಿಯವರು ಪರಸ್ಥಳಕ್ಕೆ ಚಿತ್ತೈಸುವಲ್ಲಿ ಧರ್ಮಶಿವಾಚಾರ್ಯರವರಿಗೆ ಮೊದಲು ಮರ್ಯಾದೆಗಳು ನಡಸಿ ಆಮೇಲೆ ಆಚಾರ್ಯಸ್ವಾಮಿಯವರ ಬಗೆ ಮನುಷ್ಯರಿಗೆ ಕೊಡಿಸುವದು. ಈ ಉಭಯದವರೂ ಪರಸ್ಥಳ ಚಿತ್ತೈಸಿ ಸ್ಥಳದಲ್ಲಿ ಇವರ ಬಗೆ ಮನುಷ್ಯರುಮಾತ್ರ ಇದ್ದರೆ ಸಮವಾಗಿ ನಡಸುವದು. ಈ ಉತ್ರವನ್ನು ಶಾನಭಾಗರ ಕಡಿತಕ್ಕೆ ಬರಸಿ ಪುನಃ ಧರ್ಮಶಿವಾಚಾರ್ಯರವರ ವಶಕ್ಕೆ ಕೊಡಿಸೋದು.

ಈ ಬಳಿ ಮೊಹರು ಇಧೆ.

Hay A

ನಂಬರು ೬೪೪.

ಮೈಸೂರು ಸಂಸ್ಥಾನದ ಹುಜೂರು ದಿವಾನ್ ಕಛೇರಿ
ಮುಜರಾಯಿ ಇಲಾಖೆಯಿಂದಾ.

ನಂಜನಗೂಡು ತಾಲ್ಲೂಕು ಆವಿಾಲರಿಗೆ

ತಿರುವಾಲಂಗಾಡು ಅಘೋರಧರ್ಮ ಶಿವಾಚಾರ್ಯ ಸ್ವಾಮಿಗಳವರು ನಂಜನಗೂಡಿಗೆ ದಯಮಾಡತಕ್ಕದ್ದಾಗಿ ಮಾಮೂಲ್‌ಮೇರೆ ರಹದಾರಿ ಕೊಟ್ಟಿರುವದಲ್ಲದೆ ಅವರು ದೇವಸ್ಥಾನಕ್ಕೆ ದಯಮಾಡಿದಾಗ್ಯೆ ಸ್ವಾಮಿಗಳಿಗೆ ಮಾಡ ತಕ್ಕ ಮರ್ಯಾದೆ ವಿಚಾರವಾಗಿ ನಿಮಿಗೆ ಇದೇ ಮಾಹೆ ೧೦ ನೇ ಮಕ್ಕಂ ೬೦೪ ನೇ ನಂಬರ್ ಹುಕುಂ ಸಹಾ ಕೊಟ್ಟಿರುತ್ತೆ.

ಸದರಿ ಮಠದ ಏಜಂಟ್ ರಾಮೈಯ್ಯ ಶಾಸ್ತ್ರಿಗಳು ಈದಿನ ಈ ಆಫೀಸಿಗೆ ಹಾಜರಾಗಿ ರೂಬರೂಬು ಹಾಜ ರ್‍ಮಾಡಿದ ಧಾತು ಸಂವತ್ಸರದ ಭಾದ್ರಪದ ಬಹುಳ ೧೧ ಮಕ್ಕಂನ ಹಳೆ ಅಸಲು ಸನ್ನದನ್ನ ಪರಾಂಬರಿಸಲಾಯಿತು.

ಸದರಿ ಸನ್ನದಿನಲ್ಲಿ "ಧರ್ಮಶಿವಾಚಾರ್ಯರವರು ದೇವಸ್ಥಾನಕ್ಕೆ ಚಿತ್ತೈಸುವಲ್ಲಿ ರುದ್ರಪಾದವನ್ನ ವಳಿಗೋಪುರದ ಬಾಗಲು ಪರ್ಯಂತಕ್ಕೂ ಎದುರಾಗಿ ಬಿಜಮಾಡಿಸಿಕ್ಕೊಂಡು ಹೋಗಿ ಸನ್ನಿಧಿಗೆ ಬಿಜಮಾಡಿಸಿಕ್ಕೊಂಡು ಬಂದು ನೇವುಕ ಪ್ರಕಾರಕ್ಕೆ ಮರ್ಯಾದೆಯನ್ನು ನಡಿಸುವದು" ಎಂದು ಸಾಫ್ ನಮೂದಿರುವದ್ದರಿಂದ ಅದರಂತೆ ಮರ್ಯಾದೆಯನ್ನ ನಡಿಸ ಬೇಕು. ಸದರಿ ಸನ್ನದಿನ ಕಾಪಿ ಇದರೊಡನೆ ಕಳುಹಿಸಿಧೆ.

ಬ ತಾ|| ೧೯ ನೇ ನವಂಬರ್ ೧೮೯೬, ಬೆಂಗಳೂರು.

By order,
(Sd.) A. SREENIVASACHARLU,
Muzrai Secretary.

ನಂಬರ್ ೬೪೫.

ಅಘೋರಧರ್ಮ ಶಿವಾಚಾರ್ಯ ಸ್ವಾಮಿಗಳವರ ಮಠದ ಏಜಂಟ್ ರಾಮೈಯ್ಯ ಶಾಸ್ತ್ರಿಗಳವರಿಗೆ.

ನೀವು ಬರದುಕ್ಕೊಂಡ ಈ ತಾರೀಖಿನ ಅರ್ಜಿಗೆ ಜವಾಬಾಗಿ ಮೇಲ್ಕಂಡ ಹುಕುಂ ಕಾಪಿಯನ್ನ ನಿಮ್ಮ ತಿಳು ವಳಿಕೆಬಗ್ಯೆ ಕಳುಹಿಸಿಧೆ.

ತಾ|| ೧೯-೧೧-೯೬, ಬೆಂಗಳೂರು.

By order,
(Sd.) A. SREENIVASACHARLU,
Muzrai Secretary.

(ಶಿ. ಕೈ.)

From

NAWAB VALAJAH AMIR-UL-HIND,

UMDATUL MULK, AZIFIDOWLA BAHADUR,

ZAFURJANG,

Commander-in-Chief.

To

Gumastas of Military, Jaghirdars,

Landholders and Palyagars, etc.

When Dharma Sivachari Guru Parivaram moves from Channapatna, Brahmanath in double Palki and other lavazama of the Matt he should be treated kindly with respect and care should be taken that he should pass safely from their respective boundaries. If any member of the Parivaram who is disciple does any thing contrary to the mamool he should be warned and punished.

10th Rabi-ul-val 1188

1774

ಶ್ರೀ ನಂಜುಂಡ.

ಈಶ್ವರ ಸಂವತ್ಸರದ ನಿಜಾಶ್ವಿಜ ಬ|| ೧೦ ಲ್ಲು ಶ್ರೀಮತು ನಂಜರಾಜೈಯ್ಯನವರು ನಮ್ಮ ಶೀಮೆ ಗಡಿಗಳ ಗುರಿಕಾರರಿಗೆ ಸ್ನೇಹಾನು ಸಂಪ್ರೀತಿಯಿಂ ಕಾರ್ಯಕ್ಕೆ ಕಳುಹಿದ ವಿನಯಾರ್ಥ--ಅತವಣೆ ಪಾರುಪತ್ಯಗಾರರಿಗೆ ಸಂಪ್ರೀತಿಯಿಂ ಕಾರ್ಯ ಅದಾಗಿ—ಧರ್ಮ ಶಿವಾಚಾರ್ಯರು ಜಂಬುಕೇಶ್ವರಕ್ಕೆ ಸಾಗಿಹೋಗುವದ್ದರಿಂದಾ ನಿಮ್ಮ ನಿಮ್ಮ ಗಡಿಗಳ ಮಾರ್ಗೇವಾಗಿ ಬಂದಲ್ಲಿ ಪ್ಯಾಟೆಯಲ್ಲಿ ಬಿಡಿದಿ ಯಲೆ ಕಾಯಿ ಅಡಿಗೆಬ್ಬು ಕುಂಬಾರಸ್ವರೂಪು ಸಂಗಡ ಬಂದ ಜನಕ್ಕೆ ತಕ್ಕ ಒಂದು ಹೊತ್ತಿಗೆ ಸೊಬಕ್ಕರ ಹಾಲು ಮೊಸರು ಸಹಾ ಕೊಡಿಸಿ ಗಡಿಯಿಂದ ಮುಂದಣ ಗಡಿ ಪರ್ಯಂತ್ರ ಒಂದು ಆದಳದ ಬೆಸ್ತರು ಮೂರು ಮತ್ತು ಕುದುರೆ ಎರಡು ದೀವಟಿಗೆ ಜನ ೨ ವಾಲೆಕಾರ ಜನ ೬ ಹೊರೆಯಾಳುಜನ ೪ ಸಹಾ ಕೊಡಿಸಿ ಸಾಗಿಸಿ ಕಳುಹಿಸುವದು. ಕಡೆಗಡಿಯಿಂದ ಜಂಬುಕೇಶ್ವರ ಪರ್ಯಂತ್ರ ಒಂದು ಆಂದಳದ ಬೆಸ್ತರು ದೀವಟಿಗೆಯನರು ಮತ್ತು ವಾಲೆಕಾರರು ಹೊರೆಯಾಳು ಸಹಾ ಕೂಡ್ಲಿಟ್ಟು ಸಾಗಿಸಿ ಕಳುಹಿಸಿ ಇವರು ಅಲ್ಲಿಗೆ ತಲಪಿದ ತರ್ವಾಯ ಬೆಸ್ತರು ಮುಂತಾದವರನ್ನು ಕರಸಿಕೊಂಬದು.

ಈ ಬಳಿ ಮೊಹರಿಧೆ.

ಕೃಷ್ಣರಾಜ ಒಡಯರವರು.

ಖರ ಸಂವತ್ಸರದ ಚೈತ್ರ ಶು|| ೫ ಶುಕ್ರವಾರದಲ್ಲು ಶ್ರೀಮತು || || ಆರಮನೆ ಶೀಮೆ ಗಡಿಗಳ ಅನುಲದಾರ ಕಿಲೆದಾರಗೆ ಬರಸಿ ಕಳುಹಿಪ ನಿರೂಪ ಆದಾಗಿ--ನಗೆರತ ಗುರು ಧರ್ಮ ಶಿವಾಚಾರ್ಯರ ಮಠದ ಸ್ವಾಮಿ ಗಳು ಭವಾನಿ ಕೂಡ್ಲು ತಾಲ್ಲೂಕದಲ್ಲಿ ಇರುವದರಯಿಂದಾ ಇವರು ಸರಕಾರದ ಸೀಮೆಯಲ್ಲಿ ತಮ್ಮ ಶಿಷ್ಯರ ಬಳಿಗೆ ಸಂಚಾರಾ ಬರುವಪರಿಂದಾ ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬರುವಲ್ಲಿ ಹೋಗುವಲ್ಲಿ ಇರುವಲ್ಲಿ ಸಹಾ ಮರ್ಯಾದೆ ಮಾಡಿ ನಡೆಸಿಕ್ಕೊಂಡು ಬರುವದು. ಇಳಿಯುವಬಗ್ಯೆ ಕೈದವರ ಜಾಗಾ ಕೊಡಿಸಿ ರಾತ್ರಿ ಕಳ್ಳರ ಉಪದ್ರವ ತಟ್ಟದಂತೆ ಖಬರದಾರಿ ಮಾಡಿಸಿ ಗಡಿಯಿಂದ ಗಡಿಗೆ ರಹದಾರಿಬಗ್ಯೆ ಎರಡು ಆಳು ಕೊಡುವದು. ಈ ಮಠದವರು ಗಡಿಯಿಂದ ಗಡಿಗೆಹೋದ ದಿವಸ ಮಾತ್ರ ತಕ್ಕಷ್ಟು ಹಾಲು ಕಟ್ಟಗೆ ಕೊಡಿಸುವದು. ಮುಜಲ ಮಾಡಿದ ದಿವಸ ಕೊಡಕೆಲಸವಿಲ್ಲಾ.

ತಾ|| ೧೮ನೆ ಮಾಹೆ ಮಾರ್ಚಿ ಸಃ ೧೮೩೧ನೆ ಇಸವಿ

ಖತ ಸುಬ್ಬರಾವು, ಮುನಿಷಿ, ಹುಜೂರು ಈ ಬಳಿ ಶ್ರೀಕೃಷ್ಣ ಎಂದಿಧೆ.

ನಂ. 2162 Encl.
24-10-06

ಮೈಸೂರು ಶ್ರೀಮನ್ಮಹಾರಾಜರವರ ಗೌರ್ನಮೆಂಟ್
ಮುಜರಾಯಿ ಇಲಾಖೆಯಿಂದಾ.

ಬೆಂಗಳೂರಿಗೆ ಬಂದಿರುವ ಅಘೋರ ಧರ್ಮ ಶಿವಾಚಾರ್ಯ ಸ್ವಾಮಿಗಳವರ ಮಠದ ಏಜಂಟರಿಗೆ.

ನಿಮ್ಮಿಂದಬಂದ ಮಾಹೆಮುಜಕೂರು ಅನೆ ಮತ್ತುಂ ಗಲರ್ಗನೆ ನಂಬರು ಅರ್ಜಿ ಶ್ರುತವಾಯಿತು.

ನಿಮ್ಮ ಅರ್ಜಿಯಲ್ಲಿ ಕೇಳಿರುವ ಪ್ರಕಾರ ರಹದಾರಿಯನ್ನು ತಯಾರ್ಮಾಡಿಸಿ ಇದರೊಡನೆ ಕಳುಹಿಸಿದೆ.

ಬ ತಾ|| —೧೧—೦೬
ಬೆಂಗಳೂರು

By order
(Sd.) L. ANANTASAMI RAO,
Secretary, Muzrai Department.

ಜಿ. ಸಿ.

ಮೈಸೂರು ಶ್ರೀಮನ್ಮಹಾರಾಜರವರ ಗೌರ್ನಮೆಂಟ್
ಮುಜರಾಯಿ ಇಲಾಖೆಯಿಂದಾ.

ಮೈಸೂರು ಶೀಮೆ ಗಡಿಗಳ ಆಮಲ್‌ದಾರ್, ಡೆ|| ಅಮಲ್‌ದಾರ್, ಶಿರಸ್ತೆದಾರ್, ಪೊಲೀಸ್ ಇನ್‌ಸ್ಪೆಕ್ಟರ್, ಕೊತ್ವಾಲ್, ಠಾಣೆದಾರ್ ವಗೈರೇರಿಗೆ ಬರಸಿ ಕಳುಹಿಸಿದ ನಿರೂಪ ಅದಾಗಿ.

ತಿರುವಾಲಂಗಾಡು ಅಘೋರ ಧರ್ಮಶಿವಾಚಾರ್ಯ ಸ್ವಾಮಿಗಳವರು ಬೆಂಗಳೂರಿಂದ ದೊಡ್ಡಬಳ್ಳಾಪುರ, ದೇವನ ಹಳ್ಳಿ, ಹೊಸಕೋಟೆ, ಕೋಲಾರ ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕುಗಳಲ್ಲಿಯೂ, ಹಾಸನ ಡಿಸ್ಟ್ರಿಕ್ಟ್ ಆರಶೀಕೆರೆ ಈ ತಾಲ್ಲೂಕುಗಳ ಮಾರ್ಗವಾಗಿ ಪ್ರಯಾಣ ಮಾಡುವದ್ದರಿಂದ ನಿಮ್ಮ ನಿನ್ನ ಗಡಿಗಳ ಮಾರ್ಗವಾಗಿ ಬಂದಲ್ಲಿ ಪೈದುವಾರ್ ಜಾಗಾದಲ್ಲಿ ಇಳಿಸಿ, ಇಳಿದ ಬಳಿಯಲ್ಲಿ ರಾತ್ರಿವೇಳೆ ಕಳ್ಳರು ಕಾಕರ ಉಸದ್ರವವಾಗದಂತೆ ಖಬರ್‌ದಾರ್ ಮಾಡಿಸಿ ವಾಜಬಿ ಖರೀದಿಗೆ ಬೇಕಾದ ಸಾಮಾ ಕೊಡಿಸಿಕೊಟ್ಟು ಈಬಗ್ಯೆ ಕ್ರಯದ ಹಣವನ್ನು ಆವರಿಂದ ಮಾಲೀ ಕರಿಗೆ ಕೊಡಿಸಿಕೊಡುವದು. ಇವರ ಸಂಗಡ ೪ ಬೆಳ್ಳಿ ಕಟ್ಟಿಗೆ ಹಿಡಿಯುವವರು, ೧ ಆನೆ, ೨ ಕುದುರೆ, ೫ ಭಂಡಿಗಳು, ೧ ಪಲ್ಲಕ್ಕಿ, ೧ ಶ್ವೇತಛತ್ರಿ, ೨ ಸೂರೆಪಾನ, ೨ ಸುರಟಿ, ೨ ನಗಾರಿ, ೧ ಚೂರಿ, ೨ ತುಬಾಕಿ, ೧ ರಿವಾಲ್ವರ್, ೨ ಕತ್ತಿ, ೪ ಬೆಲ್ಲೆಗಳು, ೨ ಬಾವಟೆ ಗರುಡಧ್ವಜಗಳು, ೩ ಬಿಲ್ಲಿ ಜವಾನರು ಸಹಿತ ಬರುವದ್ದರಿಂದ ನಿಮ್ಮ ಗಡಿಗಳ ಕಣವೆಯಲ್ಲಿ ಅಟಕಾಯಿಸದೆ ಬಿಟ್ಟುಬಿಡುವದು.

ಬ ತಾ|| ನೇ ಆಕ್ಟೋಬರ್ ೧೯೦೬, ಮೊಕ್ಕಾಂ ಬೆಂಗಳೂರು.

By order
(Sd.) L. ANANTASWAMY RAO,
SECRETARY
Muzrai Department

ಜಿ. ಶಿ.

ಮೈಸೂರು ಶೀಮೆಯ ಮುಜರಾಯಿ ಕಮಿಷ್ಣರವರ ಕಛೇರಿಯಿಂದಾ.

ಮೈಸೂರು ಶೀಮೆಯ ಎಲ್ಲಾ ತಾಲ್ಲೂಕು ಆಮಿಲರು ಮತ್ತು ಡೆಪ್ಯುಟಿ ಆಮಿಲರಿಗೆ ಬರೆಸಿ ಕಳುಹಿಸಿದ ನಿರೂಪ ಆದಾಗಿ:—

ನಂಬರು R. Dis. No. 56 of 1927-28.
ತಾ|| 5ನೇ ಡಿಶೆಂಬರ್ 1927 ನೇ ಇಸವಿ ದರಜಾಗಾ ಬೆಂಗಳೂರು.

ತಿರುವಾಲಂಗಾಡು ಅಘೋರ ಧರ್ಮ ಶಿವಾಚಾರ್ಯಸ್ವಾಮಿಗಳವರು ಹೊಸೂರಿಂದಾ ಹೊರಟು ಮೈಸೂರು ಶೀಮೆಯ ಎಲ್ಲಾ ತಾಲ್ಲೂಕುಗಳ ಮಾರ್ಗವಾಗಿ ಪ್ರಯಾಣ ಮಾಡುವುದರಿಂದಾ ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ, ಐದುವಾರು ಜಾಗಾದಲ್ಲಿ ಇಳಿಸಿ ಇಳಿದಬಳಿಯಲ್ಲಿ ರಾತ್ರಿನೇಳೆ ಕಳ್ಳರು ಕಾಕರು ಉಪದ್ರವವಾಗದಂತೆ ಖಬರ್‌ದಾರಿಮಾಡಿಸಿ ವಾಜಿಬೀಖರೀದಿಗೆ ಬೇಕಾದ ಸಾಮಾನು ಕೊಡಿಸಿಕೊಡುವುದು. ಇವರಸಂಗಡ ೪ ಬೆಳ್ಳಿಕಟ್ಟಗೆ ಹಿಡಿಯುವರು, ೧ ಆನೆ, ೨ ಕುದುರೆ, ೫ ಭಂಡಿಗಳು, ೧ ಪಲ್ಲಕ್ಕಿ, ೧ ಶ್ವೇತಛತ್ರಿ, ೨ ಸೂರೇಪಾನ, ೨ ಸುರಟಿ, ೨ ನಗಾರಿ, ೧ ಚೂರಿ, ೨ ತುಪಾಕಿ, ೧ ರಿವಾಲ್ವಾರ್, ೨ ಕತ್ತಿ, ೪ ಬಿಲ್ಲೆಗಳು, ೨ ಬಾವಟಿ ಗರುಡಧ್ವಜಗಳು, ೮ ಬಿಲ್ಲೆ ಜವಾನರು ಸಹಿತ ಬರುವದ್ದರಿಂದಾ ನಿಮ್ಮ ನಿಮ್ಮ ಗಡಿಗಳ ಕಣಿವೆಯಲ್ಲಿ ಆಟಕಾಯಿಸದೆ ಬಿಟ್ಟುಬಿಡುವುದು.

P. G. D'SOUZA,
Muzrai Commissioner in Mysore.

N. B.—This Rahadari is issued on the lines of the one granted to the Matha on 24-10-1906, and on the authority of letter No. 928 M. F. 143—27—2, dated 3-12-1927, from the Financial Secretary to the Government of Mysore.

ಶ್ರೀನಂಜುಂಡ



ವಿಷುಸಂವತ್ಸರದ ಆಶ್ವೀಜ ಬಹುಳ ಅರಲ್ಲು ಶ್ರೀಮತು ನಂಜರಾಜ್ಯಯ್ಯನವರು ದೇವೇಗೌಡಗೆ ಬರಸಿಕಳುಹಿದ ಕಾರ್ಯ ಆದಾಗಿ. ಗೆರಳೆಪುರದಲ್ಲಿರುವ ಧರ್ಮ ಶಿವಾಚಾರ್ಯರಿಗೆ ಕಟ್ಟಿ ಪ್ರಕಾರಕ್ಕೆ ಸಲ್ಲತಕ್ಕ ವರ್ಷಾಶನವು ಕೊಡಿಸ ಲಿಲ್ಲವೆಂಬದಾಗಿಯೂ, ಕೆರೆಕೆಳಗೆಣ ಗದ್ದೆಯಲ್ಲಿ ೩॥ ೨೯೦ ಗದ್ದೆಯನ್ನು ಕಂದಾಯಕ್ಕೆ ಚೀಟು ಬರಸಿಕೊಟ್ಟು ಈಗ ಆಬಗೆ ಗದ್ದೆಯನ್ನು ರಾಮಾವಧಾನಿಗೆ ಸಾಗುಮಾಡುವದಾಗಿಯೂ ಯತ್ನಮಾಡಿ ಇಧೆಯುತೆ. ಇವರಿಗೆ ಸಾಗು ವಳಿ ಮಾಡಿದ ಗದ್ದೆಯನ್ನು ಮೆಲಾಡಿದವರಿಗೆ ಸಾಗುಮಾಡುವದಕ್ಕೆ ಕಾರಣವೇನು ಇದ್ದೀತು. ಇವರಿಗೆ ಪ್ರಾಕು ಸಾಗುವಳಿಯಾಗಿರುವ ಗದ್ದೆಯನ್ನ ಈ ಧರ್ಮ ಶಿವಾಚಾರ್ಯರಿಗೆ ನಡಸಿಕ್ಕೊಂಡು ರಾಮಾವಧಾನಿಗಳಿಗೆ ಬದುಲು ಗದ್ದೆಯನ್ನ ಕೊಡಿಸೋದು ಇವರಿಗೆ ಸಲ್ಲುವ ವರ್ಷಾಶನವು ಇವರಿಗೆ ಕೊಡವೆ ಇರಲು ಕಾರಣವೇನು? ಇವರಿಗೆ ಸಲ್ಲುವ ಹಣವನ್ನು ಕೊಡಿಸಿ ಮುಂದೆ ತಿಂಗಳುಗಟ್ಟಿಯಲ್ಲು ಕೊಡಿಸಿಕ್ಕೊಂಡು ಬರೋದು. ಇವರ ವಟ್ಟನಲ್ಲಿ ಮರ್ಯಾದೆಗೊಡಿ ನಡಸಿಕೊಂಡು ಬರೋದು. ದೇವಸ್ಥಾನಕ್ಕೆ ಬರತಕ್ಕ ವಿಭೂತಿಕಾಣಿಕೆ ಬಗೆ ಹಣ ಪ್ರಾಕುಮೇರೆಗೆ ಒಂದಲ್ಲಿ ಇವರಿಗೆ ಸಲ್ಲುವ ಹಣವನ್ನು ಪ್ರಾಕುಮೇರೆಗೆ ಕೊಡುವದು.

ಈ ಬಳಿ ಮೊಹರ್.

ಶ್ರೀನಂಜುಂಡ

ಶ್ರೀ ನಂಜುಂಡೇಶ್ವರ ಸ್ವಾಮಿಯವರು

ಧಾತು ಸಂವತ್ಸರದ ಭಾದ್ರಪದ ಬ|| ೧೦ ಲ್ಲು ಶ್ರೀಮತು ನಂಜರಾಜೈಯನವರು ನಂಜನಗೊಡು ಪಾರುಪತ್ಯ ಗಾರ ಗೋಪಾಲೈಯ್ಯನಿಗೆ. ಸಂಪ್ರೀತಿಯಿಂ ಕಾರ್ಯ ಆದಾಗಿ—ಶ್ರೀಯುನರ ದೇವಸ್ಥಾನದ ಹಣದಲ್ಲಿ ಧರ್ಮ ಶಿವಾ ಚಾರ್ಯರ ಮಠಕ್ಕೆ ವರ್ಷ ೧ಕ್ಕೆ ಕಂಗು ೩೦೦ ೯೦ ಕ್ಕೆ ಪ್ರಸಾದ ಸ್ವಾಮ್ಯ ಕಂಗು ೩೫ ೯೦ ಶ್ಯಾಕ್ಕೆ ಹಣ ಕಂಗು ೫೬೫ ೯೦ ವರಹ ಸಹಾ ಕೊಟ್ಟು ಬರೊ ರೀತಿಗೆ ಕಟ್ಟೆ ಮಾಡಿಶಿ ಇದ್ದೀತು. ಆ ಪ್ರಕಾರಕ್ಕೆ ಧರ್ಮ ಶಿವಾಚಾರ್ಯರ ಮಠಕ್ಕೆ ವರುಷ ಒಂದಕ್ಕೆ ಕಂಠಿರಾಯ ಮುನ್ನೂರು ವರಹಾಕ್ಕೆ ಪ್ರಸಾದ ಸ್ವಾಮ್ಯ ಕಂಠಿರಾಯ ಮುವ್ವತ್ತೈದು ವರಹಾವು ಕಡಮೆ ಕೈಹಣ ಕಂಠಿರಾಯ ಇನ್ನೂರ ಅರವತ್ತೈದು ವರಹಾವನ್ನು ಶ್ರೀಯುವರ ದೇವಸ್ಥಾನದ ಬಗೆ ಹಣದಲ್ಲಿ ವರುಷಂಪ್ರತಿಯಲ್ಲು ಕೊಟ್ಟು ನಡಸಿಕೊಂಡು ಬರುನದು. ಈ ಉತ್ತರ ಪ್ರತಿಯು ದೇವಸ್ಥಾನದ ಶ್ಯಾನ ಭಾಗರ ಕಡಿತಕ್ಕೆ ಬರಿಸಿ ತಿರಿಗಿ ಕೊಡಿಸೋದು.

ಈ ಬಳಿ ಮೊಹರ್ ಇಧೆ.